ಕೆಲವು ರಸ್ತೆಗಳು ಅಗಲವಾಗಿ ಚೆನ್ನಾಗಿದ್ದರೆ ಮಿಕ್ಕವು ಅಷ್ಟಕ್ಕಷ್ಟೆ. ತಿರುಗಿತಿರುಗಿ ಆಯಾಸವಾಗಿ ಮತ್ತೆ ಆನಂದರಾವ್ ವೃತ್ತಕ್ಕೆ ಬಂದವಳಿಗೆ ತೀವ್ರ ನಿರಾಶೆಯಾವರಿಸಿತು. ಟೀವಿ, ಪತ್ರಿಕೆಗಳಲ್ಲಿ ಚಿತ್ರರಂಗದ ಸುದ್ದಿ ಬಂದಾಗೆಲ್ಲ ಗಾಂಧಿನಗರ ಎಂಬ ಶಬ್ದವನ್ನು ಪದೇಪದೇ ಜೋಡಿಯಾಗಿ ಕೇಳುತ್ತಾ ಅವೆರಡರ ನಡುವೆ ಅವಿನಾಭಾವ ಸಂಬಂಧ ಕಲ್ಪಿಸಿಕೊಂಡವಳಿಗೆ ಗಾಂಧಿನಗರವೊಂದು ಉದ್ಯಾನವನ ಮಧ್ಯದ, ಹೂಬಳ್ಳಿಗಳು ತುಂಬಿದ ವೈಭವೋಪೇತ ಉಪನಗರದಂತೆಯೂ, ಯಾವಹೊತ್ತಿಗು ಅಲ್ಲಿ ಚಿತ್ರರಂಗದ ಘಟಾನುಘಟಿ ತಾರೆಯರು ಮಾರುಮಾರಿಗೆ ಓಡಾಡಿಕೊಂಡೋ ಅಥವಾ ಚಿತ್ರೀಕರಣದಲ್ಲಿ ನಟಿಸುತ್ತಲೋ ಸಿಗುತ್ತಾರೆ ಅನ್ನುವ ಚಿತ್ರ ಚಿತ್ತಭಿತ್ತಿಯಲ್ಲಿ ಕೊರೆದುಹೋಗಿತ್ತು. ಮಾಮೂಲಿನ ಟಾರುಕಿತ್ತ ರಸ್ತೆ, ಹೊಂಡಬಿದ್ದ ಫುಟ್‌ಪಾತು, ಕಸ, ವಾಸನೆ, ಬೀದಿನಾಯಿಗಳು, ಜನಜಂಗುಳಿಯಲ್ಲಿ ನಾಯಕಿಯ ಸೇವಕಿಪಾತ್ರ ಮಾಡುವವಳೂ ಕಾಣದೆ ಆಘಾತವಾಯ್ತು. ಆಗಲೆ ಮಧ್ಯಾಹ್ನ ದಾಟಿತ್ತು. ಎದುರು ಕಂಡ ಹೋಟೆಲಿನಲ್ಲಿ ಊಟ ಮುಗಿಸಿ ಬಂದವಳೆದುರು ಮತ್ತದೇ ಪ್ರಶ್ನೆ. ಹೋಗಿ ಅದೇ ಜ್ಯೂಸ್ ಅಂಗಡಿಯಲ್ಲಿ ಕುಳಿತಳು. ಬೇಡವಿದ್ದರು ಮೂಸಂಬಿರಸ ಕುಡಿಯುವಂತೆ ತೋರಿಸುತ್ತ, '...ಅಲ್ಲಾ, ಈ ಗಾಂಧೀನಗರ ಅಂದರೆ ಚಿತ್ರರಂಗಕ್ಕೆ ಸಂಬಂಧಿಸಿದ್ದಲ್ವ?' ಲೋಕಾಭಿರಾಮಕ್ಕೆ ಎಂಬಂತೆ ಸುರುಮಾಡಿದಳು.

'ಹೌದೂ...'

'ಮತ್ತೆ?... ಇಲ್ಲಿ ನಟನಟಿಯರು ಯಾರೂ ಕಾಣಿಸೋದೆ ಇಲ್ಲ, ಎಂಥಾ ವಿಚಿತ್ರ ಅಲ್ವಾ!...'

'ಅಯ್ಯ! ನೀವೊಬ್ರು. ಅವರೇನ್ಮಾಡತಾರೆ ಇಲ್ಲಿ? ಟ್ರಾಫಿಕ್‌ಜಾಮ್ ಮಾಡಕ್ಕಾ? ಯಾವುದೋ ಸ್ಟುಡಿಯೊದಲ್ಲಿರತಾರೆ. ತಪ್ಪಿದ್ರೆ ಸ್ವಿಟ್ಜರ್ಲೆಂಡ್, ಪ್ಯಾರೀಸಿನಲ್ಲಿರ್ತಾರೆ. ಈಗೆಲ್ಲ ಅಲ್ಲೇ ಅಲ್ವ ಪಿಕ್ಚರು ತೆಗೆಯೋದು? ಇಲ್ಲೆಲ್ಲೊ ಪ್ರೊಡ್ಯುಸರಗಳ ಆಫೀಸುಗಳಿರಬಹುದು ನಾನು ನೋಡಿಲ್ಲ. ಅವ್ರಾದ್ರೂ ಯಾವಾಗ್ಲು ಇಲ್ಯಾಕೆ ಬಿದ್ದಿರತಾರೆ, ಪಾಷ್ ಹೋಟೆಲುಗಳಲ್ಲಿ ಮಾತುಕತೇಲಿರತಾರೆ. ಇಲ್ಲಾಂದ್ರೆ ಸ್ಪಾಟುಗಳಲ್ಲಿ ಹೀರೋಯಿನ್‌ಗಳ ಮುಸುಡಿ ನೋಡತಾ ಬಿದ್ದಿರತಾರೆ ಅನ್ಸುತ್ತೆ...' ಹಣ್ಣನ್ನು ಜ್ಯೂಸರಿಗೆ ತುರುಕುವ ಗತಿಯಲ್ಲೇ ಅವಳ ಮಾತು ಏರಿಳಿತಲ್ಲಿ ಸಾಗಿತ್ತು. ಇನ್ನಷ್ಟು ಮುಂದುವರಿಸಿದರೆ ತನ್ನ ಬಗ್ಗೆ ಸಂದೇಹ ಬರಬಹುದು ಅನ್ನಿಸಿತು. ಆದರೆ ಕೆಲವು ಸಂಶಯಗಳು ನಿವಾರಣೆಯಾಗಿದ್ದವು ಮತ್ತು ಹೊಸ ಸಮಸ್ಯೆಗಳಿಗೆ ದಾರಿಯಾಗಿತ್ತು. ಸ್ಟುಡಿಯೊಗಳನ್ನು, ಚಿತ್ರೀಕರಣದ ಸ್ಪಾಟುಗಳನ್ನು ಹೇಗೆ ಹುಡುಕುವುದು? ಅದಕ್ಕೂ ಮುಖ್ಯವಾದ್ದೊಂದಿತ್ತು; ರಾತ್ರಿ ತಾನು ಹೋಟೆಲಿನ ರೂಮು ಖಾಲಿಮಾಡಬೇಕು. ಹೌದು, ಅದೀಗ ಮುಖ್ಯ. 'ನಾನಿರೋ ಹೋಟೆಲಿನ ರೂಮು ಬಿಡಬೇಕು. ಬೇರೆ ಯಾವದಾದರು ಸುರಕ್ಷಿತ ಜಾಗದಲ್ಲಿ ನಂಗೆ ರೂಮು ಕೊಡಿಸಬಹುದಾ... ನಿಮಗೆ ಪರಿಚಯವಿರುತ್ತೆ ಅಂತ ಕೇಳಿದೆ.'

ಜ್ಯೂಸಿನವಳು ಏನೋ ಯೋಚಿಸುತ್ತಿದ್ದು ಆಮೇಲೆ ಇವಳತ್ತ ತಿರುಗಿದಳು. 'ದಿವಸಕ್ಕ, ತಿಂಗಳಿಗಾ?' 'ಯಾವುದಾದರೂ ಸರಿ' ಅಂದದ್ದಕ್ಕೆ ಇರು ಅನ್ನುವಂತೆ ಕೈಸನ್ನೆ ಮಾಡಿ ಮೊಬೈಲಿನಲ್ಲಿ ನಂಬರು ಒತ್ತಿ ಯಾರಿಗೋ ಮಾತಾಡಿದಳು. 'ನನ್ನ ಪರಿಚಯದೋರು, ರೋಮು ಮಾಡ್ಕೊಂಡಿದಾರೆ. ಒಬ್ರು ಪಾರ್ಟನರು ಬೇಕು ಅಂದಿದ್ರು. ಈಗ ಬರತಾರೆ' ಅಂದಳು. ಹದಿನೈದು ನಿಮಿಷದ ನಂತರ ಇಪ್ಪತ್ತೈದು ಮೂವತ್ತು ವಯಸ್ಸಿನ ಮಹಿಳೆ ಸ್ಕೂಟಿಯಲ್ಲಿ ಬಂದಿಳಿದವಳು 'ಹಾಯ್... ನಾನು ಮಂಜುಳಾ ಅಂತ. ನೀವೇನ ಫೋನಿನಲ್ಲಿ ರೆಫರ್ ಮಾಡಿದ್ದು?' ಅನ್ನುತ್ತ ಕೈ ನೀಡಿದಳು. 'ಬನ್ನಿ ತೋರಿಸ್ತೀನಿ' ಅಂತ ಸ್ಕೂಟಯ ಮೇಲೆ